ಅವರಿಗೆ ನೆಂಟ್ರು. ಯಾರೂ ಕೂಡ ಏನೂ ಮಾಡಕ್ಕಾಗಲ್ಲ" ಕೈಲಾಗದವನಂತೆ ನುಡಿದ. ಅವನ "ಯಾರೂ ಕೂಡ" ಪದ ಅರುಂಧತಿಗೆ ವಿಚಿತ್ರವೆನ್ನಿಸಿತು. ಮೊದಲ ಬಾರಿಗೆ ತನಗಿಂತ ಹನ್ನೆರಡು ವರ್ಷಕ್ಕೆ ಹಿರಿಯನಾದ ಮಣಿವೇಲು ಹೇತಲಾಂಡಿಯ ಹಾಗೆ ಕಂಡು ಬಂದ. "ಹಾಗಾದ್ರೆ ಆ ಹುಡುಗಿ ಗತಿ..." ಧ್ವನಿ ಆಕೆಗೆ ಗೊತ್ತಿಲ್ಲದಂತೆ ಗಟ್ಟಿಯಾಗಿತ್ತು. ಮಣಿ ಗಮನಿಸಲಿಲ್ಲ. "ಅವ ಒರೆಸಿಕೊಂಡು ಹೋದ ಹಾಗೆ ಇವಳೂ ಹೋದರಾಯಿತು" ಪಕ್ಕಾ ಲೆಕ್ಕಾಚಾರಿಯಂತೆ ನುಡಿದ.

"ಅಂದ್ರೆ?..."

"ಅಂದ್ರೆ ಏನೂ ಇಲ್ಲ. ಹುಡುಗರು ಹೇಗೆ ಎಲ್ಲದನ್ನೂ ಕ್ಯಾಶುಯಲ್ ಆಗಿ ತಗೋತಾರೋ ಹುಡುಗಿಯರೂ ಹಾಗೆ ಮಾಡಿದ್ರೆ ಏನೂ ಸಮಸ್ಯೆ ಇರಲ್ಲ. ಮಾಡೋದೆಲ್ಲ ಮಾಡಿ ಆಮೇಲೆ ಶೀಲ, ಮರ್ಯಾದೆ ಅಂತ ತಲೆಕೆಡಿಸಿಕೊಂಡ್ರೆ ಏನೂ ಮಾಡಕ್ಕಾಗಲ್ಲ. ಅದೂ ಅಲ್ದೆ ಈ ಕೇಸು ಗೌರ್ಮೆಂಟು ಲಾಯರ್ ಕೈಯಲ್ಲಿರತ್ತೆ. ನಾನೇನು ಮಾಡಕ್ಕಾಗಲ್ಲ; ನೀನು ಅಧಿಕ ಪ್ರಸಂಗ ತೋರಿಸೋದೇನು ಬೇಕಿಲ್ಲ" ಆದೇಶ ನೀಡುವವನಂತೆ ಹೇಳಿ ಮುಸುಕುಗಿರಿದು ಮಲಗಿಯೇ ಬಿಟ್ಟ.

ಇದಾದ ಎರಡು ದಿನಕ್ಕೆ ಹನುಮಕ್ಕ ಮತ್ತೆ ಮಗಳೊಂದಿಗೆ ಬಂದಳು. ಪಾಸಿಟಿವ್ ಆದಂತಹ ವಿಚಾರವೊಂದನ್ನು ತಾವು ಕೇಳಬಹುದೆಂಬ ನಿರೀಕ್ಷೆ ಅವರ ಮುಖದಲ್ಲಿ ಇದ್ದಂತ್ತಿತ್ತು. ಆದರೆ ಅರುಂಧತಿಯ ಸುಕ್ಕುಗಟ್ಟಿದ ಕಣ್ಣಂಚನ್ನು ಇಳಿಬಿದ್ದ ನೋಟವನ್ನು ಗಮನಿಸಿದ ಮೇಲೆ ಅವರ ಮುಖದಲ್ಲಿದ್ದ ಕಾತರ ಕರಗಿ ಹೋಯಿತು. "ಹನುಮಕ್ಕ, ಸಾಕ್ಷಿ ಪೂರ ನಿನ್ನ ಮಗಳ ವಿರುದ್ಧವೇ ಇದೆಯಂತೆ" ಅರುಂಧತಿ ತಾನೇ ಮೊದಲು ನುಡಿದಳು. "ಅಕ್ಕ, ಸತ್ಯವಾಗಲೂ ನಾನು ಅಂತಹವಳಲ್ಲ. ಇಷ್ಟ ಪಟ್ಟಿದ್ದು ನಿಜ. ಮದ್ವೆ ಮಾಡ್ಕೋತೀನಿ ಅಂದ ಮೇಲೆ ಅವನ ಜೊತೆ ಸುತ್ತಿದ್ದು ನಿಜ. ಆದ್ರೆ ನನ್ನಿಷ್ಟದ ವಿರುದ್ಧ" ಮಧುವಂತಿ ಉಮ್ಮಳಿಸಿದಳು. ಅರುಂಧತಿಗೆ ಹೇಗೆ ಸಾಂತ್ವನ ಹೇಳುವುದೋ ತೋಚಲಿಲ್ಲ. ಆಕೆ ಸುಮ್ಮನಿದ್ದಳು. ಆ ನಂತರ ಅಮ್ಮ ಮಗಳಿಬ್ಬರೂ ತಮಗೆ ತಾವೇ ಸಮಾಧಾನಿಸಿಕೊಂಡರು.

ಅರುಂಧತಿಯ ತಲೆ ಕೆಲಸಕ್ಕಿಳಿದಿತ್ತು. "ಒಂದು ಕೆಲಸ ಮಾಡು. ಪೊಲೀಸ್ ಸ್ಟೇಷನ್ನಿನ ಎದುರು ಧರಣಿ ಕೂತು ಬಿಡು. ಎಲ್ಲ ಕೆಲಸ ಆಗತ್ತೆ" ಸಲಹೆ ಕೊಟ್ಟಳು. ಆ ಕ್ಷಣಕ್ಕೆ ತಾನು ಪಕ್ಕಾ ಲಾಯರನ ಹೆಂಡತಿ ಎನ್ನಿಸಿ ಖುಷಿಯಾಯಿತಾದರೂ ಅದು ಪ್ರಪಂಚದ ಮಟ್ಟಿಗೆ ಮಾತ್ರ ಎಂಬುದು ನೆನಪಾಗಿ ಮನಸ್ಸು ಅಲ್ಲಿಯೇ ಮುದುಡಿತು. ಆದರೆ ಮರುಕ್ಷಣವೇ ಮಧುವಂತಿ, "ಹಾಗೆ ಮಾಡಿದ್ರೆ ಅವ ಮತ್ತೆಂದು ನನಗೆ ಸಿಗೋದೇ ಇಲ್ಲ ಅಲ್ವಾ ಅಕ್ಕ?" ಎಂದಳು. ಅವಳ ಕಣ್ಣಿನಲ್ಲಿ ಅವನ ತಪ್ಪುಗಳನ್ನು ಕ್ಷಮಿಸಬಹುದಾದ ಪ್ರೀತಿಯನ್ನು ಕಂಡು ಅರುಂಧತಿಗೆ ಅಯ್ಯೋ ಎನ್ನಿಸಿತು. ಜೊತೆಗೇ ತನ್ನನ್ನೂ ಸೇರಿದಂತೆ ಹೆಂಗಸರು ಇಂತಹದೇ ಭಾವನೆಗಳ ಕಾರಣಕ್ಕಾಗಿಯೇ ಜೀವನ ಪೂರ ನರಳುವುದು ಎಂದು ಜಿಗುಪ್ಸೆಯೂ ಆಯಿತು. "ಹೇಳಕ್ಕಾಗಲ್ಲ. ಹೆದರಿ ಬಂದರೂ ಬರಬಹುದು" ಆಸೆ ಹುಟ್ಟಿಸಿದಳು. "ಹೌದಾ" ಮಧುವಂತಿ ಅರಳಿದಳು. ಜೊತೆಗೆ ಅವಳ ಅಮ್ಮನೂ...

ರಾತ್ರಿ ಮಣಿ ಬಂದವನೇ ಧುಮುಗುಟ್ಟಿದ; "ನಿನಗ್ಯಾಕೆ ತಲೆಹರಟೆ?" ಎಂದ. ಅರುಂಧತಿ ಸ್ವಲ್ಪ ಗಾಬರಿಯಿಂದಲೇ "ಯಾಕೆ ಏನಾಯಿತು?" ಎಂದಳು. "ಆಗೋದೇನು? ನೀನು ಅವರನ್ನ ಸ್ಟೇಷನ್ ಮುಂದೆ ಕೂರಕ್ಕೆ ಹೇಳಿದೆಯಂತೆ... ಪೊಲೀಸಿನವರು ಆ ಹುಡುಗನ್ನ ಕರ್ಕೊಂಡು ಬಂದಿದ್ದಾರೆ. ಈಗ ನೋಡು ಎಂಎಲ್ಎಯಿಂದ ಹಿಡಿದು ಪುಡಿ ರಾಜಕಾರಣಿಗಳವರೆಗೆ ನನಗೆ ಫೋನು. ಬೇಕಿತ್ತಾ ಇದು?" ಎಂದು ಕೂಗತೊಡಗಿದ. ಅರುಂಧತಿಗೆ ಒಳಗೊಳಗೆ ಬೆಲ್ಲ ತಿಂದ ಅನುಭವ. ತಾನೇನೋ ಸಾಧಿಸಿದೆನೆಂಬ ಖುಷಿಯಲ್ಲಿ ಸಿಳ್ಳು ಹೊಡೆಯಬೇಕೆನ್ನಿಸಿ "ಹೌದಾ?" ಏನೂ ಗೊತ್ತಿಲ್ಲದವಳಂತೆ ನುಡಿದಳು. "ನೀನು ಇಂತಹದ್ದರಲ್ಲಿ ಮೂಗು ತೂರಿಸದೇ ಇದ್ರೆ ಒಳ್ಳೆಯದು. ಇಷ್ಟು ದಿನ ಏನೋ